# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

## ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಆಸ್ಪತ್ರೆಯಲ್ಲಿ ಇದ್ದಾಗ 1 ಗಂಟೆಯ ನಂತರ ನನ್ನ ತಂದೆ ತಲೆ, ಕಾಲು, ಕೈ ಹಾಗೂ ದೇಹದ ಇತರ ಭಾಗಗಳಲ್ಲಿ ರಕ್ತ ಗಾಯಗೊಂಡು ಚಿಕಿತ್ಸೆಗಾಗಿ ಬಂದಿದ್ದರು. ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಚಾಸಾ-7 ರವರ ಬಳಿ ವಿಚಾರಿಸಲಾಗಿ, ಚಾಸಾ-8 ನಮ್ಮ ಬಳಿ ಕೆಲಸ ಮಾಡುತ್ತಿದುದ್ದನ್ನು ವಿರೋಧಿಸಿ ಆರೋಪಿತರು ಆತನ ಮೇಲೆ ಹಾಗೂ ನನ್ನ ಮೇಲೆ ಹಲ್ಲೆ ಮಾಡಿದ್ದು ಅದೇ ವಿಚಾರಕ್ಕೆ ರಾತ್ರಿ ನನ್ನ ತಂದೆಯ ಮೇಲೆಯೂ ಹಲ್ಲೆ ಮಾಡಿದ್ದರು. ನನ್ನ ತಂದೆಗೆ 20 ದಿನಗಳ ನತಂರ ಎಸ್.ಎನ್.ಆರ್ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿದ್ದು ಅವರನ್ನು ವಿಚಾರಿಸಲಾಗಿ ಈ ಕೇಸಿನಲ್ಲಿರುವ ಎಲ್ಲಾ ಆರೋಪಿತರು ಲೊಂಗ್, ಚಾಕು ಹಾಗೂ ಕಟ್ಟಿಗೆಗಳಿಂದ ಹಲ್ಲೆ ಮಾಡಿದ್ದರು ಎಂದು ತಿಳಿದು ಬಂತು. ಈ ಬಗ್ಗೆ ಪೋಲಿಸರಲ್ಲಿ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಬಿ.ಆರ್.ಎಸ್ ವಕೀಲರು ಕಾಲಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 19.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.